REVISED NOTIFICATION

ದೂರವಾಣಿ : 0821-2419292
2419240

ಮೈಸೂರು ವಿಶ್ವವಿದ್ಯಾನಿಲಯ

# ಯುವರಾಜ ಕಾಲೇಜು

(ವಿಶ್ವವಿದ್ಯಾನಿಲಯದ ಸಾಮರ್ಥ್ಯವರ್ಧಿತ ಉತ್ಕೃಷ್ಟಜ್ಞಾನ ಸ್ವಾಯತ್ತತಾ ಕಾಲೇಜು)
**ಜೆ.ಎಲ್.ಬಿ.ರಸ್ತೆ, ಮೈಸೂರು–570 005**

ಸಂಖ್ಯೆ: ಮೈವಿವಿ/ ಯುಕಾ(ಸ್ವಾ)/ ಗುತ್ತಿಗೆ/ಸಿಬ್ಬಂದಿ–1 /2016–17 ದಿನಾಂಕ 22.07.2016

## ಪ್ರಕಟಣೆ

**ವಿಷಯ** : ಗುತ್ತಿಗೆ ಆಧಾರಿತವಾಗಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ನಿಗದಿತ ಅವಧಿಗೆ ತಾತ್ಕಾಲಿಕವಾಗಿ ನೇಮಕಾತಿ ಮಾಡುವ ಬಗ್ಗೆ

**ಉಲ್ಲೇಖ** : ವಿ.ವಿ. ಅನುಮತಿ ಪತ್ರ ಇಟಿ.3 /540/2009–10 ದಿನಾಂಕ 21.07.2016

ಸ್ವಾಯತ್ತತ ಕಾಲೇಜಾದ **ಯುವರಾಜ ಕಾಲೇಜಿನಲ್ಲಿ ಗುತ್ತಿಗೆ ಆಧಾರಿತ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಐದು ವರ್ಷಗಳ ಅವಧಿಗೆ ಭರ್ತಿ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.** ಅರ್ಜಿಯನ್ನು ಐದು ಸೆಟ್‌ಗಳಲ್ಲಿ ಸಲ್ಲಿಸಬೇಕು. ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಸ್ನಾತಕ ಕೋರ್ಸುಗಳಿಗೆ ಮಾಹೆಯಾನ ರೂ.45,000/– ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಮಾಹೆಯಾನ ರೂ.50,000/– ಕ್ರೋಢೀಕೃತ ಸಂಭಾವನೆಯನ್ನು ನೀಡಲಾಗುವುದು. ಬೇರಾವುದೇ ಇನ್ನಿತರ ಭತ್ಯೆಗಳನ್ನು ನೀಡುವುದಿಲ್ಲ.

ಭರ್ತಿಮಾಡಿದ ಅರ್ಜಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು – 570 005, ಇವರಿಗೆ **ದಿನಾಂಕ 06.08.2016ರೊಳಗೆ** ಸಲ್ಲಿಸಬೇಕು.

**ಹುದ್ದೆಗಳ ವಿವರ : ಒಟ್ಟು ಹುದ್ದೆಗಳು : 48**

ಇಂಗ್ಲಿಷ್ (4); ಬಿ.ಬಿ.ಎ./ಎಂ.ಬಿ.ಎ. (06); ಮಾಲಿಕ್ಯುಲಾರ್ ಬಯಾಲಜಿ (02);, ಬಯೋಕೆಮಿಸ್ಟ್ರಿ (02); ಮೈಕ್ರೋಬಯಾಲಜಿ (01); ಕಂಪ್ಯೂಟರ್ ಸೈನ್ಸ್ (07); ಬಾಟನಿ (02); ಫಿಸಿಕ್ಸ್ (05); ಕೆಮಿಸ್ಟ್ರಿ (05); ಜೂಆಲಜಿ (01); ಮ್ಯಾಥಮ್ಯಾಟಿಕ್ಸ್ (04); ಎನ್ವಿರಾನ್ಮೆಂಟಲ್ ಸೈನ್ಸ್ (01); ಫುಡ್ ಸೈನ್ಸ್ (02); ಎಲೆಕ್ಟ್ರಾನಿಕ್ಸ್ (03); ಬಯೋಟೆಕ್ನಾಲಜಿ (03)

ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.in ಅಥವಾ ಯುವರಾಜ ಕಾಲೇಜಿನ ವೆಬ್‌ಸೈಟ್ www.ycm.uni-mysore.ac.in ವೀಕ್ಷಿಸಿ, ಮಿಕ್ಕೆಲ್ಲಾ ವಿವರವನ್ನು ಪಡೆಯಬಹುದಾಗಿದೆ.

**ಆದೇಶದ ಮೇರೆಗೆ**

ಸಹಿ/–
**ಅಧ್ಯಕ್ಷರು**
ಆಡಳಿತ ಮಂಡಳಿ

ಸಹಿ/–
**ಪ್ರಾಂಶುಪಾಲರು** ಹಾಗೂ
ಸದಸ್ಯ ಕಾರ್ಯದರ್ಶಿ, ಆಡಳಿತ ಮಂಡಳಿ

# ನಿಬಂಧನೆಗಳು

1. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದಿಂದ ಸಂಬಂಧಿಸಿದ ವಿಷಯದಲ್ಲಿ ಉತ್ತಮ ಶೈಕ್ಷಣಿಕ ಗುಣಮಟ್ಟವನ್ನು ಹೊಂದಿರಬೇಕು; ಕನಿಷ್ಠ 55% ಅಂಕಗಳನ್ನು (ಅಥವಾ ಗ್ರೇಡಿಂಗ್ ಸಿಸ್ಟಂ ಇದ್ದಲ್ಲಿ, ಅದಕ್ಕೆ ಸಮನಾದ ಶ್ರೇಣಿಯ ಅಂಕಗಳನ್ನು ಪಡೆದಿರಬೇಕು);

2. ಅಭ್ಯರ್ಥಿಗಳು ಮೇಲಿನ ವಿದ್ಯಾರ್ಹತೆಯ ಜೊತೆಗೆ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಅಥವಾ ಸಿ.ಎಸ್.ಐ.ಆರ್. ಅವರು ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್.ಇ.ಟಿ.)/ಎಸ್.ಎಲ್.ಇ.ಟಿ./ಎಸ್.ಇ.ಟಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. 2009ರ ನಂತರ ಪಿಹೆಚ್.ಡಿ. ಪಡೆದವರು ಕೋರ್ಸ್ ವರ್ಕ್ಸ್ ಮಾಡಿರಬೇಕು ಮತ್ತು ಸಂಬಂಧಿಸಿದ ಪ್ರಮಾಣಪತ್ರವನ್ನು ಲಗತ್ತಿಸಬೇಕು.

3. ಮೇಲಿನ (1) ಮತ್ತು (2) ಹೊರತುಪಡಿಸಿ, ಅಭ್ಯರ್ಥಿಗಳು ಪಿಹೆಚ್.ಡಿ. ಪದವಿಯನ್ನು ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ನಿರೂಪಿಸಿರುವ ಮಾನದಂಡಗಳ ಪ್ರಕಾರ ಪಡೆದಿದ್ದಲ್ಲಿ, ಅವರುಗಳಿಗೆ ಎನ್.ಇ.ಟಿ./ಎಸ್.ಎಲ್.ಇ.ಟಿ. /ಎಸ್.ಇ.ಟಿ ಪರೀಕ್ಷೆಯ ತೇರ್ಗಡೆ ಕಡ್ಡಾಯವಿರುವುದಿಲ್ಲ;

4. ಯಾವ ವಿಷಯಗಳಲ್ಲಿ ಯು.ಜಿ.ಸಿ./ಸಿ.ಎಸ್.ಐ.ಆರ್. ಸಂಸ್ಥೆಯು ಎನ್.ಇ.ಟಿ./ ಎಸ್.ಎಲ್.ಇ.ಟಿ./ ಎಸ್.ಇ.ಟಿ ಪರೀಕ್ಷೆಯನ್ನು ನಡೆಸುತ್ತಿಲ್ಲವೋ, ಅಂತಹ ವಿಷಯಗಳಿಗೆ ಎನ್.ಇ.ಟಿ./ಎಸ್.ಎಲ್.ಇ.ಟಿ./ ಎಸ್.ಇ.ಟಿ ಕಡ್ಡಾಯವಿರುವುದಿಲ್ಲ.

5. (ಅ) ಕಂಪ್ಯೂಟರ್ ಸೈನ್ಸ್ ವಿಷಯದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸುವವರು ಎಂ.ಎಸ್ಸಿ – ಕಂಪ್ಯೂಟರ್ ಸೈನ್ಸ್ / ಎಂ.ಸಿ.ಎ. ಮತ್ತು ಎನ್.ಇ.ಟಿ./ಎಸ್.ಎಲ್.ಇ.ಟಿ./ಎಸ್.ಇ.ಟಿ ಪರೀಕ್ಷೆಗಳಲ್ಲಿ ತೇರ್ಗಡೆ/ ಪಿಹೆಚ್.ಡಿ. ಪದವಿಯನ್ನು ಹೊಂದಿರಬೇಕು.

   (ಆ) ಬಿ.ಇ. ಮತ್ತು ಎಂ.ಟೆಕ್ ಪದವಿಯನ್ನು ಹೊಂದಿರುವವರು ಕಂಪ್ಯೂಟರ್ ಸೈನ್ಸ್ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.

   (ಇ) ಬಿ.ಬಿ.ಎ. / ಎಂ.ಬಿ.ಎ. ಕೋರ್ಸಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ ಸಲ್ಲಿಸುವವರು ಯು.ಜಿ.ಸಿ. / ಸರ್ಕಾರದ ಆದೇಶ ಸಂಖ್ಯೆ ಇಡಿ/246/ಡಿಸಿಇ/2011 ದಿನಾಂಕ 12.02.2015 / ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರಬೇಕು

6. **ಹುದ್ದೆಗಳಿಗೆ ಮೀಸಲಾತಿ :** ಸರ್ಕಾರದ ಆದೇಶಾನುಸಾರ 48 ಹುದ್ದೆಗಳಿಗೆ ಅನ್ವಯಿಸಿರುವ ಮೀಸಲಾತಿಯ ವಿವರವು ಈ ಮುಂದಿನಂತಿರುತ್ತದೆ.

| | |
|---|---|
| ಸಾಮಾನ್ಯ ವರ್ಗ | – 24 |
| ಪರಿಶಿಷ್ಟ ಜಾತಿ | – 07 |
| ಪರಿಶಿಷ್ಟ ವರ್ಗ | – 02 |
| ಕ್ಯಾಟಗರಿ–1 | – 02 |
| 2ಎ | – 07 |
| 2ಬಿ | – 02 |
| 3ಎ | – 02 |
| 3ಬಿ | – 02 |
| **ಒಟ್ಟು ಹುದ್ದೆಗಳು** | **– 48** |

7. **ಗುತ್ತಿಗೆ ಆಧಾರಿತ ತಾತ್ಕಾಲಿಕ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಗಳು ಖಾಯಮಾತಿಯ ಹಕ್ಕನ್ನು ಹೊಂದಿರುವುದಿಲ್ಲ. ಗುತ್ತಿಗೆ ಆಧಾರದಲ್ಲಿ ನೇಮಕವಾದ ಸಹಾಯಕ ಪ್ರಾಧ್ಯಾಪಕರನ್ನು ಪ್ರತಿ ಒಂದು ವರ್ಷದ ಸೇವೆಯ ನಂತರ ಸೇವೆಯಿಂದ ಒಂದು ದಿನದ ಮಟ್ಟಿಗೆ ಬಿಡುಗಡೆಗೊಳಿಸಿ, ಅವರ ಕರ್ತವ್ಯ ಮೌಲ್ಯಮಾಪನ ಆಧಾರದ ಮೇಲೆ ತೃಪ್ತಿಕರವೆಂದು ಕಂಡುಬಂದಲ್ಲಿ ಮಾತ್ರ ಮುಂದಿನ ವರ್ಷಕ್ಕೆ ಮರುನೇಮಕ ಮಾಡಲಾಗುವುದು.**

8. **ಅರ್ಜಿ ಶುಲ್ಕ** : ಪ್ರತಿಯೊಂದು ಹುದ್ದೆಗೂ ಪ್ರತ್ಯೇಕವಾದ ಅರ್ಜಿಯನ್ನು ನಿಗದಿತ ನಮೂನೆಯಲ್ಲಿಯೇ ಸಲ್ಲಿಸಬೇಕು. ಅರ್ಜಿ ಶುಲ್ಕ ರೂ.500/– (ಎಸ್.ಸಿ./ಎಸ್.ಟಿ./ಕ್ಯಾಟಗರಿ–1ರ ಅಭ್ಯರ್ಥಿಗಳಿಗೆ ರೂ.250/–) ನಿಗದಿ ಪಡಿಸಲಾಗಿದೆ (ಪಾವತಿಸಿದ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ)(NON REFUNDABLE). ಅರ್ಜಿ ಶುಲ್ಕವನ್ನು **ಪ್ರಾಂಶುಪಾಲರು, ಯುವರಾಜ ಕಾಲೇಜು, ಮೈಸೂರು ಇವರಿಗೆ ಹೆಸರಿಸಿದ, ಮೈಸೂರಿನಲ್ಲಿ ನಗದೀಕರಿಸಬಹುದಾದ, ಡಿಮ್ಯಾಂಡ್ ಡ್ರಾಫ್ಟ್ ಮೂಲಕವೇ ಸಲ್ಲಿಸಬೇಕು**)

9. **ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಟಿ.ಎ./ಡಿ.ಎ. ನೀಡಲಾಗುವುದಿಲ್ಲ**

10. **ಪೂರ್ಣ ಭರ್ತಿಮಾಡದ/ಅಪೂರ್ಣ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.**

11. ಪ್ರತ್ಯಕ್ಷ ಹಾಗೂ/ಅಥವಾ ಪರೋಕ್ಷವಾಗಿ ಯಾವುದೇ ರೀತಿಯಿಂದ ಶಿಫಾರಸ್ಸು ಮಾಡಿಸಿದ ಅರ್ಜಿಯನ್ನು ಪುರಸ್ಕರಿಸುವುದಿಲ್ಲ.

12. ನಿಗದಿ ಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದ ದಿನಾಂಕ, ಸಮಯ, ಸ್ಥಳ ಇತ್ಯಾದಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ ಮತ್ತು ಕಾಲೇಜಿನ ವೆಬ್‌ಸೈಟಿನ ಮೂಲಕ ಪ್ರಕಟಿಸಿ ತಿಳಿಸಲಾಗುವುದು. ಸಂದರ್ಶನಕ್ಕೆ ಯಾವುದೇ ಪ್ರತ್ಯೇಕವಾದ ಆಹ್ವಾನವನ್ನು ಅಭ್ಯರ್ಥಿಗಳಿಗೆ ಕಳುಹಿಸಲಾಗುವುದಿಲ್ಲ.

13. ಅರ್ಜಿಯನ್ನು ಸಲ್ಲಿಸುವಲ್ಲಿ ನಿಧಾನವಾದಲ್ಲಿ / ಅಂಚೆ ಮೂಲಕ ಸಲ್ಲಿಸುವಲ್ಲಿ ವಿಳಂಬವಾದಲ್ಲಿ, ನಿಗದಿ ಪಡಿಸಿದ ಕೊನೆಯ ದಿನಾಂಕ ಮೀರಿ ಕಳುಹಿಸುವ ಅರ್ಜಿಯನ್ನು ಸ್ವೀಕರಿಸುವುದಿಲ್ಲ ಮತ್ತು ಅದಕ್ಕೆ ಯುವರಾಜ ಕಾಲೇಜು ಆಡಳಿತ ಮಂಡಳಿಯ ಹೊಣೆಯಾಗುವುದಿಲ್ಲ.

14. ಅರ್ಜಿಯನ್ನು ಸಲ್ಲಿಸಲು ನಿಗದಿ ಪಡಿಸಿರುವ ಕೊನೆಯ ದಿನಾಂಕದೊಳಗಾಗಿ ಅಭ್ಯರ್ಥಿಗಳು ಸಂಬಂಧಿಸಿದ ವಿದ್ಯಾರ್ಹತೆಯನ್ನು ಹೊಂದಿರಬೇಕು.

15. ಅಭ್ಯರ್ಥಿಗಳು ಎಸ್.ಸಿ/ಎಸ್.ಟಿ/ಒ.ಬಿ.ಸಿ. ಇತ್ಯಾದಿಯ ಮೀಸಲಾತಿಯನ್ನು ಕೋರಿದ್ದಲ್ಲಿ/ ತಿಳಿಸಿದ್ದಲ್ಲಿ, ಅದಕ್ಕೆ ಸಂಬಂಧಿಸಿದ ನಿಗದಿತ ನಮೂನೆಯ, ಸಂಬಂಧಿಸಿದ ಅಧಿಕೃತ ಅಧಿಕಾರಿಗಳಿಂದ ಇತ್ತೀಚೆಗೆ ಪಡೆದಿರುವ ಪ್ರಮಾಣಪತ್ರ ಲಗತ್ತಿಸಿರಬೇಕು.

16. ಯಾವುದೇ ಇನ್ನಿತರ ಮೀಸಲಾತಿಯನ್ನು ಬಯಸಿ, ಅರ್ಜಿ ಸಲ್ಲಿಸುವಲ್ಲಿ, ಅಭ್ಯರ್ಥಿಗಳು ಸಂಬಂಧಿಸಿದ ಅಧಿಕೃತ ಅಧಿಕಾರಿಗಳಿಂದ ಪಡೆದಿರುವ ಸಿಂಧುತ್ವ ಹೊಂದಿರುವ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು. ಮೀಸಲಾತಿಯನ್ನು ಕೋರಿ ಸಂಬಂಧಿಸಿದ ದಾಖಲಾತಿಗಳನ್ನು / ಪ್ರಮಾಣ ಪತ್ರಗಳನ್ನು ಲಗತ್ತಿಸದೆ ಇದ್ದಲ್ಲಿ, ಅಂತಹ ಅಭ್ಯರ್ಥಿಯ ಅರ್ಜಿಗಳನ್ನು ತಿರಸ್ಕರಿಸಲಾಗುವುದು / ಪರಿಗಣಿಸುವುದಿಲ್ಲ ಹಾಗೂ ಈ ಸಂಬಂಧ ಅಭ್ಯರ್ಥಿಗೆ ಯಾವ ಮಾಹಿತಿಯನ್ನೂ ನೀಡುವುದಿಲ್ಲ.

17. ಅಂಕಗಳಲ್ಲಿ ರಿಯಾಯಿತಿ : ಸರ್ಕಾರದ ನಿಯಮಾವಳಿಯಂತೆ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ವಿಶೇಷ ಚೇತನ / ದೈಹಿಕ ಮತ್ತು ದೃಶ್ಯ ವಿಶೇಷ ಚೇತನರಿಗೆ, ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿಯನ್ನು ಪರಿಗಣಿಸುವಲ್ಲಿ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಅಂಕಗಳಲ್ಲಿ 5%ರಷ್ಟು ರಿಯಾಯಿತಿಯನ್ನು ನೀಡಲಾಗುವುದು. ನೇರ ನೇಮಕಾತಿ ಪ್ರಕ್ರಿಯೆಯಲ್ಲಿ, ವಿದ್ಯಾರ್ಹತೆಯ ಗುಣಮಟ್ಟಕ್ಕಾಗಿ ಮಾತ್ರ ಇದನ್ನು ಪರಿಗಣಿಸಲಾಗುವುದು.

18. **ಪ್ರಕಟಣೆಯಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗಾಗಿ ಅರ್ಜಿಯನ್ನು ಆಹ್ವಾನಿಸಿರುವುದು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಗುತ್ತಿಗೆ ಆಧಾರಿತವಾಗಿದೆ. ಯಾವುದೇ ಸಂದರ್ಭದಲ್ಲಿ ಪ್ರಕಟಿಸಲಾಗಿರುವ ಹುದ್ದೆಯ ಸಂಖ್ಯೆಯು ಅವಶ್ಯಕತೆಗೆ ತಕ್ಕಂತೆ ಬದಲಾವಣೆಗೆ ಒಳಪಟ್ಟಿರುತ್ತದೆ ಮತ್ತು ಯಾವುದೇ ಕಾರಣಕ್ಕೆ ನೇಮಕಾತಿ ಪ್ರಕಟಣೆಯನ್ನು / ಪ್ರಕ್ರಿಯೆಯನ್ನು ಹಿಂಪಡೆಯುವ/ರದ್ದುಪಡಿಸುವ ಸಂಪೂರ್ಣ ಅಧಿಕಾರ ಕಾಲೇಜಿನ ಆಡಳಿತ ಮಂಡಳಿಗೆ ಸೇರಿದುದಾಗಿರುತ್ತದೆ.**